ಇ) ದುರಸ್ತಿ ಕೆಲಸವನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಶೀಘ್ರದಲ್ಲಿಯೇ ಕೆಲಸವನ್ನು ಪ್ರಾರಂಭಿಸಲಾಗುವುದು.

ರಾಜ್ಯದ ಕ್ರೀಡಾಂಗಣಗಳು

4998 - ಶ್ರೀ ಎನ್. ಸಂಪಂಗಿ (ಬಾಗೇಪಲ್ಲಿ) : ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೋಲಾರ ಜಿಲ್ಲೆಯಲ್ಲಿರುವ ತಾಲ್ಲೂಕು ಮಟ್ಟದ ಕ್ರೀಡಾಂಗಣಗಳು ಎಷ್ಟು? ಎಷ್ಟು ಕ್ರೀಡಾಂಗಣಗಳ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ? ಎಷ್ಟು ಕ್ರೀಡಾಂಗಣಗಳ ಕಾಮಗಾರಿ ಪ್ರಗತಿಯಲ್ಲಿದೆ?*

ಆ) *ಬಾಗೇಪಲ್ಲಿ ಪಟ್ಟಣದ ಕ್ರೀಡಾಂಗಣದ ಕಾಮಗಾರಿ ಪೂರ್ಣವಾಗಿದೆಯೇ? ಹಾಗಿಲ್ಲದಿದ್ದಲ್ಲಿ, ಕ್ರೀಡಾಂಗಣ ಕಾಮಗಾರಿ ಪೂರ್ಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?*

ಇ) *ಏಕಲವ್ಯ ಪ್ರಶಸ್ತಿಯನ್ನು ಸರ್ಕಾರ ಎಷ್ಟು ವರ್ಷಗಳಿಂದ ಕ್ರೀಡಾಪಟುಗಳಿಗೆ ನೀಡುತ್ತಾ ಬಂದಿದೆ? ಹಾಗಿದ್ದಲಿ ಇಲ್ಲಿಯವರೆಗೆ ಈ ಪ್ರಶಸ್ತಿಯನ್ನು ಪಡೆದವರ ಹೆಸರುಗಳ ಪಟ್ಟಿಯನ್ನು ಒದಗಿಸಿಕೊಡಲಾಗುವುದೇ?*

ಈ) *ರಾಷ್ಟ್ರೀಯ ಕ್ರೀಡಾ ಕೂಟದ ಸಮಯದಲ್ಲಿ ಸರ್ಕಾರ ಕಟ್ಟಿಸಿದ ಕ್ರೀಡಾಂಗಣಗಳ ಕಾಮಗಾರಿಗಳು ಸಂಪೂರ್ಣವಾಗಿ ಮುಗಿದಿದೆಯೇ? ಪೂರ್ಣಕಾಮಗಾರಿ ಮುಗಿದಿದ್ದಲ್ಲಿ, ಅವು ಬಳಕೆಯಲ್ಲಿವೆಯೇ? ಕಾಮಗಾರಿ ಮುಗಿಯದಿರುವ ಕ್ರೀಡಾಂಗಣಗಳು ಯಾವುವು? ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?*

ಉ) *ಕೋಲಾರದಲ್ಲಿರುವ ಜಿಲ್ಲಾ ಕ್ರೀಡಾಂಗಣ ಪ್ರಸ್ತುತ ಬಳಕೆಯಲ್ಲಿದೆಯೇ? ಕ್ರೀಡಾಗಾರರಿಗೆ ಬೇಕಾದ ಸೌಲಭ್ಯಗಳು ಈ ಕ್ರೀಡಾಂಗಣದಲ್ಲಿದೆಯೇ?*

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ (ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು) :

ಅ) ಕೋಲಾರ ಜಿಲ್ಲೆಯಲ್ಲಿ 9 ತಾಲ್ಲೂಕು ಮಟ್ಟದ ಕ್ರೀಡಾಂಗಣಗಳನ್ನು ನಿರ್ಮಿಸಲು ಯೋಜಿಸಲಾಗಿದೆ. 6 ತಾಲ್ಲೂಕು ಕ್ರೀಡಾಂಗಣಗಳ ನಿರ್ಮಾಣ ಕಾಮಗಾರಿ ಪ್ರಾರಂಭಿಸಲಾಗಿದೆ. ಹಾಗೂ 3 ತಾಲ್ಲೂಕು ಕ್ರೀಡಾಂಗಣಗಳ ಕಾಮಗಾರಿ ಪ್ರಾರಂಭಿಸಲು ಸೂಕ್ತ ನಿವೇಶನ ಪಡೆಯಲಾಗುತ್ತಿದೆ.

ಆ) ಬಾಗೇಪಲ್ಲಿ ತಾಲ್ಲೂಕು ಕ್ರೀಡಾಂಗಣ ಇನ್ನೂ ಪೂರ್ಣಗೊಂಡಿರುವುದಿಲ್ಲ. ನೆಲಸಮತಟ್ಟು ಕಾಮಗಾರಿ ಮುಗಿದಿದ್ದು ಚರಂಡಿ ಕೆಲಸ ಪ್ರಗತಿಯಲ್ಲಿದೆ.

ಇ) ಕರ್ನಾಟಕ ಸರ್ಕಾರವು ಕ್ರೀಡೆಯಲ್ಲಿ ವಿಶೇಷ ಸಾಧನೆ ಮಾಡಿದಂತಹ ಕ್ರೀಡಾಪಟುಗಳಿಗೆ 1992ನೇ ಸಾಲಿನಿಂದ ಏಕಲವ್ಯ ಪ್ರಶಸ್ತಿಯನ್ನು ನೀಡಿ ಪ್ರೋತ್ಸಾಸಲಾಗುತ್ತಿದೆ. ಈವರೆಗೆ ಒಟ್ಟು 106 ಜನ

ಕ್ರೀಡಾ ಪಟುಗಳಿಗೆ ಏಕಲವ್ಯ ಪ್ರಶಸ್ತಿಯನ್ನು ನೀಡಿದ್ದು, ಪ್ರಶಸ್ತಿ ಪಡೆದವರ ಪಟ್ಟಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಈ) ರಾಷ್ಟ್ರೀಯ ಕ್ರೀಡಾಕೂಟದ ಸಮಯದಲ್ಲಿ ನಿರ್ಮಿಸಲಾದ ಕ್ರೀಡಾಂಗಣಗಳೆಲ್ಲವೂ ಸಂಪೂರ್ಣವಾಗಿ ಪೂರ್ಣಗೊಂಡಿರುತ್ತದೆ. ಅವುಗಳೆಲ್ಲವೂ ಬಳಕೆಯಲ್ಲಿ ಇರುತ್ತವೆ.

ಉ) ಕೋಲಾರದಲ್ಲಿರುವ ಸರ್ ಎಂ. ವಿಶ್ವೇಶ್ವರಯ್ಯ ಕ್ರೀಡಾಂಗಣವು ಬಳಕೆಯಲ್ಲಿರುತ್ತದೆ. ಈ ಕ್ರೀಡಾಂಗಣದಲ್ಲಿ ಕ್ರೀಡಾಪಟುಗಳಿಗೆ ಬೇಕಾದ ಸೌಲಭ್ಯಗಳು ಲಭ್ಯವಿರುತ್ತದೆ.

LIST OF EKALAVYA AWARDEES, 1992

	Name of the Sports person	Discipline
1.	P.K. Yashodhara	Power lifting
2.	S.M.H. Kirmani	Cricket
3.	K. Aine Asma Khanum	Rifle
4.	S.D. Eeshan	Athletics
5.	R. Rajan Joseph Joyal	Basketball
6.	Mahammed Eliyas	Ball Badminton
7.	Arvind Savur	Billiards
8.	C.S. Poonacha	Hockey
9.	A.V. Ravi	Body Building
10.	Satish Rai	Weight Lifting
11.	S.C. Mohan Kumar	Volleyball
12.	C.R. Anand	Table Tennis
13.	S. Srinivas	Kho-Kho
14.	D. Manivannan	Football
15.	D.V. Prasad	Chess
16.	Vimal Kumar	Badminton
17.	ASangitha Rao	Swimming
19.	Banumathi K. Mandan	Power Lifting

	Name of the Sports person	Discipline
20.	Shamal Ravaji Patil	Kho-Kho
21.	B.M. Geetha	Hockey
22.	Shantha Rangaswamy	Cricket
23.	Sunitha Takoor	Judo
24.	K.K. Geetha	Athletics
25.	Jayavanth Shyam	Basketball
26.	T.N. Shanthala	Ball Badminton
27.	Shama S. Kittur	Badminton
	1993	
28.	Teethamada Arjun Devaiah	Athletics
29.	Selvina Payas	Athletics
30.	V. Druva	Ball Badminton
31.	Dr. P. Asha	Badminton
32.	A. Rejakumaran	Basketball
33.	Rakha Mallik	Basketball
34.	G. Manjunath	Body Building
35.	B.V. Srinivasamurthy	Snooker
36.	Anil Kumble	Cricket
37.	Triveni M.N.	Judo
38.	Channabasavaiah	Kho-Kho
39.	Veena T.H.	Kho-Kho
40.	B. Gopi	Kabaddi
41.	Satheesh Kumar	Power Lifting
42.	A. Shashikala	Power Lifting
43.	Sridevi T.V.	Roller Skating
44.	Sajini Shetty	Swimming
45.	Shyamala Shetty	Weight lifting
46.	K.S. Uttaiah	Hockey

	Name of the Sports person	Discipline
47.	Kalpana V.	Cricket
48.	K.P. Vasantha Kumar	Shuttle Badminton
49.	G.K. Vishwanath	Table Tennis
50.	S. Poorna Rao	Table Tennis
51.	Abhijith J.	Swimming
52.	Arathi Ponnappa	Lawn Tennis
53.	Amithrai Chowduri	Volleyball
54.	T. Padmaja	Volleyball
55.	P. Srinath	Lawn tennis
56.	Mirza Najib Aga	Judo
	1994	
57.	E.B. Shaila	Athletics
58.	G.B. Nagaraj	Ball badminton
59.	Remond D'Souza	Body building
60.	M.G. Jayaram	Billiards
61.	B.S. Goutham	Basketball
62.	Javagal Srinath	Cricket
63.	M.L. Sundareshan	Cricket
64.	Vandana S. Patil	Kho-Kho
65.	Gregori Kujoor	Hockey
66.	A. Rajareddy	Handball
67.	Veerpalsingh	Judo
68.	B. Sumana	Judo
69.	A.K. Munivenkatappa	Kabaddi
70.	H. Dadapeer	Powerlifting
71.	U. Sundari	Powerlifting
72.	T.S. Karthik	Skating
73.	K. Beena	Skating

	Name of the Sports person	Discipline
74.	Meghana Narayan	Swimming
75.	V. Archana	Tennis
76.	Pushparaj Hegde	Weightlifting
	1995	
77.	C.K. Hari	Athletics
78.	H.G. Apsara	Athletics
79.	M.S. Puttaraju	Ball Badminton
80.	T. Baskar	Body Building
81.	B.K. Venkatesh Prasad	Cricket
82.	Pramila K.S. Bhat	Cricket
83.	Khaleel Ur Rehman	Football
84.	Shailesh	Gymnastic
85.	Amalaraj S.	Handball
86.	Vinod Chinnappa	Hockey
87.	Neelamma K.M.	Hockey
88.	Egnal Siddi	Judo
89.	C. Honnappa	Kabaddi
90.	T.S. Siddalingamurthy	Kho-kho
91.	Shobha N.	Kho-kho
92.	L.P. Srinivas	Powerlifting
93.	Jakulain D'Rozariyo	Powerlifting
94.	K. Srikanta Rao	Roller Skating
95.	Kavitha Poovaiah	Roller Skating
96.	Hakimuddin	Swimming
97.	Abhinay Shetty	Swimming
98.	V. Arathi	Lawn Tennis
99.	Bonathomas John	Table Tennis
100.	A. Sathish Kumar	Taekonda

	Name of the Sports person	Discipline
101.	T.B. Ravindra	Volleyball
102.	K.V. Sridhara Gowda	Weightlifting
103.	Kumar	Weightlifting
104.	Mahadev	Athletics
105.	M.R. Patil	Athletics
106.	Malathi Holla	Athletics

ನಬಾರ್ಡ್ ನೆರವಿನಿಂದ ಮಂಜೂರಾದ ಮೊತ್ತ

5000 - ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1999-2000 ಮತ್ತು 2000-2001ನೇ ಸಾಲಿನಲ್ಲಿ ನಬಾರ್ಡ್ ನೆರವಿನಿಂದ ರಾಜ್ಯದಲ್ಲಿ ಮಂಜೂರಾದ ರಸ್ತೆ ಮತ್ತು ಸೇತುವೆಗಳು ಯಾವುವು? (ವಿಸ್ತಾರವಾದ ಮಾಹಿತಿ ನೀಡುವುದು)

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ 1999-2000 ಮತ್ತು2000-2001ನೇ ಸಾಲಿನಲ್ಲಿ ನಬಾರ್ಡ್ ಯೋಜನೆ ಅಡಿಯಲ್ಲಿ ತೆಗೆದುಕೊಂಡ ರಸ್ತೆ ಮತ್ತು ಸೇತುವೆ ಯಾವುವು? (ತಾಲ್ಲೂಕುವಾರು ಮಾಹಿತಿ ನೀಡುವುದು)

ಇ) ಉತ್ತರ ಕನ್ನಡ ಜಿಲ್ಲೆ ಅಂಕೋಲಾ, ಸಿರ್ಸಿ, ಯಲ್ಲಾಪುರ ತಾಲ್ಲೂಕಿನ ಕ್ಷೇತ್ರದಲ್ಲಿ ಸರ್ವಋತು ರಸ್ತೆ ಸೇತುವೆಗಳ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಅಂಕೋಲಾ, ಸಿರ್ಸಿ, ಯಲ್ಲಾಪುರ ತಾಲ್ಲೂಕಿನ ರಸ್ತೆ, ಸೇತುವೆ ಅಭಿವೃದ್ಧಿಗೆ ಸರ್ಕಾರ ಪ್ರಯತ್ನ ಮಾಡುತ್ತಿದೆಯೇ?

ಶ್ರೀ ಧರಮ್ ಸಿಂಗ್ (ಲೋಕೋಪಯೋಗಿ ಸಚಿವರು) :

ಅ) ನಬಾರ್ಡ್ ಯೋಜನೆಯಡಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ 1999-2000ನೇ ಸಾಲಿನಲ್ಲಿ 318 ರಸ್ತೆ ಮತ್ತು 35 ಸೇತುವೆ ಕಾಮಗಾರಿಗಳು ರೂ. 188.06 ಕೋಟಿ ಅಂದಾಜು ಮೊತ್ತದಲ್ಲಿ ಹಾಗೂ 2000-2001ನೇ ಸಾಲ್ಲಿನಲ್ಲಿ ಈವರೆಗೆ 65 ರಸ್ತೆ ಮತ್ತು 14 ಸೇತುವೆ